



ಅವರ ನೆರಳಿನಂತೆ ಅಲ್ಲಿಯೇ ಕೂತಿದ್ದ ಮಹಾದೇವ ದೇಸಾಯಿಯವರು ಕಳವಳದಿಂದ ಇದನ್ನೆಲ್ಲಾ ನೋಡುತ್ತಿದ್ದರು. ಅವರ ಮುಖದಲ್ಲೂ ವ್ಯಗ್ರತೆ ಮೂಡಿತು.

‘ಮಹಾದೇವ’, ಬಾಪೂ ಅವರು ಕಣ್ಣುಗಳನ್ನು ತೆರೆದು ವೇದನೆಯಿಂದ ಹೇಳಿದರು, ‘ನನ್ನ ಧರ್ಮ ನನಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಹೇಳುತ್ತದೆ. ನನ್ನ ಪಾಪದ ಶಿಕ್ಷೆ ನನ್ನ ಮಗನಿಗೆ ಸಿಗುತ್ತಿದೆ ಎಂದು ಅನ್ನಿಸುತ್ತಿದೆ. ಪಾಪ ಮುಕ್ತಿಗಾಗಿ ನಾನು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು.’

‘ಬಾಪೂ!’ ಮಹಾದೇವ ದೇಸಾಯಿಯವರ ಧ್ವನಿ ಕಂಪಿಸುತ್ತಿತ್ತು.

‘ಹೌದು ಮಹಾದೇವ, ನಾನು ಮುಂದಿನ ಸೋಮವಾರದಿಂದ ಇಪ್ಪತ್ತೊಂದು ದಿನಗಳವರೆಗೆ ಉಪವಾಸ ಮಾಡುವುದಾಗಿ ಸರ್ಕಾರಕ್ಕೆ ಪತ್ರವನ್ನು ಬರಿ.’

‘ಬಾಪೂ!’ ಮಹಾದೇವ ದೇಸಾಯಿಯವರಿಂದ ಮಾತೇ ಹೊರಡಲಿಲ್ಲ.

‘ಅಲ್ಲದೆ, ನನ್ನ ಈ ಉಪವಾಸಕ್ಕೂ, ಯಾವುದೇ ಸರ್ಕಾರಿ ಅಥವಾ ರಾಜಕೀಯ ಕಾರಣಗಳಿಗೂ ಸಂಬಂಧವಿಲ್ಲವೆಂದು ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸು. ಈ ಉಪವಾಸ ಆತ್ಮಶುದ್ಧಿಗಾಗಿ ಮಾತ್ರ ಮಾಡುತ್ತಿದ್ದೇನೆ.’

ಮಹಾದೇವ ದೇಸಾಯಿ ಅವರಿಗೆ ಬೇರೆ ವಿಕಲ್ಪವಿರಲಿಲ್ಲ. ಬಾಪೂ ಅವರು ಹೇಳಿದಂತೆ ಅವರು ಪತ್ರವನ್ನು ಬರೆದರು. ಬಾಪೂ ಪತ್ರವನ್ನು ಗಮನವಿಟ್ಟು ಓದಿದರು, ನಂತರ ಅದರ ಕೆಳಗೆ ಸಹಿ ಮಾಡಿದರು. ಕಡೆಗೆ ಹಾಸಿಗೆಯಲ್ಲಿ ಚಕ್ಕಳಮಕ್ಕಳ ಹಾಕಿ ಕೂತು, ಪ್ರಾರ್ಥನೆ ಮಾಡಿದರು.

ಸ್ವಲ್ಪವೇ ಹೊತ್ತಿನಲ್ಲಿ ಬಾಪೂ ನಿದ್ರೆಗೆ ಜಾರಿದರು. ಆದರೆ ಮಹಾದೇವರಿಗೆ ನಿದ್ರೆ ಹತ್ತಿರವೂ ಸುಳಿಯಲಿಲ್ಲ. ಬಾಪೂ ಮೂರು ಗಂಟೆಗಳ ಕಾಲ ನಿದ್ರೆಯನ್ನು ಮಾಡಿದ ನಂತರ ಕಣ್ಣುಗಳನ್ನು ತೆರೆದರು, ಆಗ ಅವರು ಈ ಮೊದಲಿನಂತೆಯೇ ಸ್ವಸ್ಥರಾಗಿದ್ದರು. ಆದರೆ ಮಹಾದೇವ ದೇಸಾಯಿಯವರ ಕಣ್ಣುಗಳು ಮತ್ತು ಮನಸ್ಸು ಎರಡೂ ಭಾರವಾಗಿದ್ದವು.

* * *

ಎರಡು ದಿನಗಳ ನಂತರ ಪತ್ರಿಕೆಗಳಲ್ಲಿ ಬಾಪೂ ಅವರ ಉಪವಾಸದ ಬಗ್ಗೆ ಘೋಷಣೆ ಪ್ರಕಟವಾಯಿತು. ಕಳೆದ ಕೆಲವು ತಿಂಗಳುಗಳಿಂದ ಬಾಪೂ ಅವರ ಆರೋಗ್ಯ ಅಷ್ಟು ಸರಿಯಿರಲಿಲ್ಲ, ಸರ್ಕಾರ ಮೊದಲಿನಿಂದಲೇ ದೇಶದಲ್ಲಿ ವ್ಯಾಪಿಸಿದ್ದ ಬಿಗುವಿನ ವಾತಾವರಣವನ್ನು ಹೆಚ್ಚಿಸುವ ಬಗ್ಗೆ ಯಾವುದೇ ಅಪಾಯವನ್ನು ಎದುರು ಹಾಕಿಕೊಳ್ಳಲು ಬಯಸುತ್ತಿರಲಿಲ್ಲ. ಬಾಪೂ ಅವರನ್ನು ತಕ್ಷಣ ಜೈಲಿನಿಂದ ಬಿಡುಗಡೆ ಮಾಡುವುದೇ ಲೇಸೆಂದು ಯೋಚಿಸಿದ ಸರ್ಕಾರ, ಉಪವಾಸದ ಹಿಂದಿನ ದಿನದ ಸಂಜೆಯೇ ಅವರನ್ನು ಬಿಡುಗಡೆ ಮಾಡುವ ಬಗ್ಗೆ ಪ್ರಕಟಣೆಯನ್ನು ಹೊರಡಿಸಿತು, ನಾಳೆ ಬಾಪೂ ಅವರ ಆರೋಗ್ಯ ಜೈಲಿನಲ್ಲಿಯೇ ಕೈಕೊಟ್ಟರೆ ಸರ್ಕಾರಕ್ಕೆ ಹೊಡೆತ ಬೀಳುವ ಸಂಭಾವನೆಯಿಂದ ಪಾರಾಗಲು ಸರ್ಕಾರ ಬಯಸುತ್ತಿತ್ತು.

* * *

ನಿಜಾಮಿಯಾ ಹೋಟೇಲ್‌ನ ತನ್ನ ರೂಮಿನಲ್ಲಿ, ಕೊಳಕು ಹಾಸಿಗೆಯಲ್ಲಿ ಅರೆಅಮಲಿನಲ್ಲಿ ಮತ್ತು ಆಲಸ್ಯದಿಂದ ಮಲಗಿದ್ದ ಹರಿಲಾಲ ಪತ್ರಿಕೆಯಲ್ಲಿ ಈ ಸುದ್ದಿಯನ್ನು ಓದಿದಾಗ ಅಕಸ್ಮಾತ್ ಅವನ ಕಣ್ಣುಗಳಲ್ಲಿ ಕಾಂತಿ ಮೂಡಿತು. ಕ್ಷಣಮಾತ್ರದಲ್ಲಿಯೇ ಅವನ ಅಮಲು ಇಳಿಯಿತು.

ಬಾಪೂ ಅವರಿಗೆ ಈ ಹಿಂದೆ ಅವನು ಯಾವ ಪರಿಸ್ಥಿತಿಯಲ್ಲಿ ಪತ್ರವನ್ನು ಬರೆದಿದ್ದನೋ, ಅದರ ಒಕ್ಕಣೆ ಅವನಿಗೆ ನೆನಪಾಯಿತು. ರಾಜಕೋಟದ ಘಟನೆ ಸಹ ಬಾಪೂ ಅವರಿಗೆ ತಿಳಿಯದೇ ಇರಲು ಸಾಧ್ಯವಿರಲಿಲ್ಲ. ಹರಿಲಾಲ ಒಮ್ಮೆಲೆ ಎದ್ದು ಕೂತ. ಸಾಕಷ್ಟು ಹೊತ್ತು ಪತ್ರಿಕೆಗಳಲ್ಲಿ ಪ್ರಕಟಗೊಂಡ ಸುದ್ದಿಗಳನ್ನು ನೋಡಿದ. ಈ ಸುದ್ದಿಯೊಂದಿಗೇ ಸರ್ಕಾರದ ತೀರ್ಮಾನದ ಘೋಷಣೆಯೂ ಪ್ರಕಟಗೊಂಡಿತ್ತು. ಬಾಪೂ ಅವರ ಆರೋಗ್ಯದ ಬಗ್ಗೆ ಸರ್ಕಾರಕ್ಕೂ ಚಿಂತೆಯಿತ್ತು. ಬಾಪೂ ಅವರಿಗೆ ಏನಾದರೂ ಆದರೆ, ಅದಕ್ಕೆ ಹೊಣೆ ಹೊರಲು ಸರ್ಕಾರ ಸಿದ್ಧವಿರಲಿಲ್ಲ. ಈ ಸುದ್ದಿ ಇಡೀ ದೇಶವನ್ನು ಅದೆಷ್ಟು ಚಿಂತೆಯಲ್ಲಿ ಮುಳುಗಿಸಿದೆ ಎಂದೂ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಈ ಸುದ್ದಿಯಿಂದಾಗಿ ಇಡೀ ದೇಶದಲ್ಲಿ ಕೋಲಾಹಲವುಂಟಾಗಿತ್ತು. ಸುದ್ದಿಯೊಂದಿಗೆ ಮುದ್ರಣಗೊಂಡ ಬಾಪೂ ಅವರ ಭಾವಚಿತ್ರವನ್ನು ಹರಿಲಾಲ ಸಾಕಷ್ಟು ಹೊತ್ತು ನೋಡಿದ. ಬಾಪೂ ಅವರ ಮುಖದಲ್ಲಿನ ನಗು ಈ ಹಿಂದಿನಂತೆಯೇ ಇತ್ತು. ಅಶಾಂತತೆ ಅವರನ್ನು ಸ್ಪರ್ಶಿಸುತ್ತಿರಲಿಲ್ಲ.

ಆದರೆ ಹರಿಲಾಲನ ಮನಸ್ಸಿನಲ್ಲಿ ಇದ್ದಕ್ಕಿದ್ದಂತೆ ಯೋಚನೆಯೊಂದು ಹುಟ್ಟಿತು. ತಮ್ಮ ಈ ಉಪವಾಸದ ಹಿಂದೆ ರಾಜಕೀಯ ಅಥವಾ ಬೇರಾವ ಕಾರಣವೂ ಇಲ್ಲ, ಇದು ಆತ್ಮಶುದ್ಧಿಗಾಗಿ ಮಾತ್ರ ಎಂಬುದನ್ನು ಬಾಪೂ ಅವರು ಸ್ಪಷ್ಟ ಪಡಿಸಿದ್ದರು. ಹರಿಲಾಲನಿಗೆ ಇದು ತುಂಬಾ ಕಳವಳವನ್ನುಂಟು ಮಾಡುತ್ತಿತ್ತು. ಬಾಪೂ ಅವರ ಆತ್ಮ ಎಂದಾದರು ಲೇಶಮಾತ್ರವೂ ಅಶುದ್ಧವಾಗುವುದೆ ಎಂಬುದನ್ನು ಹರಿಲಾಲ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ.

ಹೀಗಿರುವಾಗ ಈ ಆತ್ಮಶುದ್ಧಿ ಯಾಕಾಗಿ?

ಈ ಹಿಂದೆ ಬಾಪೂ ಅವರೊಂದಿಗೆ ನಡೆದ ಮಾತುಕತೆಗಳು ಹರಿಲಾಲನಿಗೆ ನೆನಪಾದವು. ತಾನು, ಬಾಪೂ ಮತ್ತು ಬಾ, ಇಬ್ಬರ ವಿಚಾರಧಾರೆ ಮತ್ತು ಜೀವನ ಶೈಲಿಯಿಂದ ಅದೆಷ್ಟು ದೂರ ಬಂದಿದ್ದೇನೆ ಎಂಬುದು ಹರಿಲಾಲನಿಗೆ ನೆನಪಾಯಿತು. ಈಗ ಮರಳಿ ಹೋಗುವ ಮಾರ್ಗವೇ ಇರಲಿಲ್ಲ. ಬಾಪೂ ಅವರ ಈ ಆತ್ಮಶುದ್ಧಿಯ ಮೂಲದಲ್ಲಿ ತನ್ನ ವ್ಯವಹಾರದ ಈ ಅಶುದ್ಧಿಯೇ ಇರಬೇಕೆಂದು ಹರಿಲಾಲನಿಗೆ ಅನ್ನಿಸಿತು. ಬಾಪೂ ಅವರ ಈ ಉಪವಾಸಕ್ಕೆ ತಾನೇ ಕಾರಣ...ತಾನೇ ಕಾರಣ... ತನ್ನ ಹಿಂದಿನ ಪತ್ರವೇ ಈ ಉಪವಾಸಕ್ಕೆ ಕಾರಣ ಎಂದು ಅವನಿಗೆ ವಿಶ್ವಾಸ ಮೂಡಿತು.

ಒಂದು ವೇಳೆ ಈ ಉಪವಾಸ ಸುಖವಾಗಿ ಈಡೇರದಿದ್ದರೆ? ಅಶುಭದ ಘಟನೆ ಸಂಭವಿಸಿದರೆ? ಬಾಪೂ ಅವರ ಆರೋಗ್ಯ ಸಹ ಯಾವಾಗ ಸರಿಯಿರುತ್ತದೆ? ಒಂದು ವೇಳೆ ಆಗಬಾರದ್ದು ಆದರೆ ಅದರ ಹೊಣೆಯಿಂದ ತಾನು ಹೇಗೆ ಪಾರಾಗಲು ಸಾಧ್ಯ? ಈ ಉಪವಾಸದ ಅಸಲಿ ಕಾರಣ ಸಾರ್ವಜನಿಕವಾಗಿರದಿದ್ದಾಗ್ಯೂ, ಇದಕ್ಕೆ ಕಾರಣ ಬಾಪೂ ಅವರಿಗೆ ತಿಳಿದಿರಬಹುದು, ಬಾ ಅವರಿಗೂ ತಿಳಿದಿರಬಹುದು...ಮತ್ತೆ... ಹರಿಲಾಲನಿಗೆ ಯಾರೂ ಏನೂ ಹೇಳದಿದ್ದಾಗ್ಯೂ, ಹರಿಲಾಲನಿಗೂ ಈ ವಿಷಯ ತಿಳಿದಿದೆ.

ಹರಿಲಾಲ ಎದ್ದು ನಿಂತ. ಎರಡು ಲೋಟ ನೀರು ಕುಡಿದ. ಮುಖವನ್ನು ತೊಳೆದುಕೊಂಡ. ನಿರುದ್ದೇಶದಿಂದ ಕೋಣೆಯಲ್ಲಿ ಸುತ್ತು ಹಾಕಿದ. ನಂತರ ಮತ್ತೆ ಕೆಳಗೆ ಕೂತ. ಅಲ್ಲಿಯೇ ಬಿದ್ದಿದ್ದ ಹಾಳೆಯನ್ನು ದಿಂಬಿನ ಮೇಲಿಟ್ಟುಕೊಂಡು ಪತ್ರವನ್ನು ಬರೆಯಲಾರಂಭಿಸಿದ

‘ಪೂಜ್ಯ ತಂದೆಯವರಿಗೆ,

ನಿಮ್ಮ ಉಪವಾಸದಲ್ಲಿ ನನ್ನ ಧರ್ಮವೇನು?

ನಿಮ್ಮನ್ನು ಇಷ್ಟಪಡುವವರೆದುರು ಈ ಪ್ರಶ್ನೆ ಉದ್ಭವಿಸುತ್ತದೆ.

ನನ್ನ ಪುತ್ರ ಧರ್ಮವೇನು? ನಿಮ್ಮ ಬದಲು ನಾನು ಉಪವಾಸವನ್ನು ಮಾಡಲು ಸಿದ್ಧನಿದ್ದೇನೆ. ಈ ದೇಹದಿಂದ ಏನೇನು ಸಾಧ್ಯವೋ, ಎಲ್ಲವನ್ನೂ ನೀವು ಯಾಚಿಸಿ. ನಾನು ಕೊಡಲು ಸಿದ್ಧನಿದ್ದೇನೆ. ನನ್ನ ಈ ಪ್ರಶ್ನೆಯ ಹಿಂದೆ ಯಾವುದೇ ಶರತ್ತುಗಳಿಲ್ಲ. ಆದರೆ ನೀವು ಉಪವಾಸ ಮಾಡದಂಥ ಮಾರ್ಗವನ್ನು ಹುಡುಕಿ. ಇದರಿಂದ ನನಗೆ ತುಂಬಾ ಸಂತೋಷವಾಗುವುದು. ನಿಮ್ಮ ಉತ್ತರವನ್ನು ತಕ್ಷಣ ನಿರೀಕ್ಷಿಸುತ್ತಿದ್ದೇನೆ.

ನಿಮ್ಮ ಆಜ್ಞಾಕಾರಿ ಪುತ್ರ ಹರಿಲಾಲನ ಸಾಷ್ಟಾಂಗ ನಮಸ್ಕಾರಗಳು.

ಹರಿಲಾಲನ ಹೃದಯದಲ್ಲಿ ಪರಿವರ್ತನೆಯಾಗಿದೆ ಎಂದು ಬಿಂಬಿಸುತ್ತಿದ್ದ ಈ ಪತ್ರ ಬಾಪೂ ಅವರಿಗೆ ಅನಪೇಕ್ಷಿತವಾಗಿತ್ತು. ಹರ್ಷ, ವಿಷಾದ, ಶೋಕ, ಚಿಂತೆ ಅಥವಾ ವ್ಯಥೆಯಂಥ ಸಹಜ ಭಾವನೆಗಳಿಂದ ಸಾಮಾನ್ಯವಾಗಿ ದೂರವಿರುತ್ತಿದ್ದ ಬಾಪೂ ಅವರ ಮನಸ್ಸು ಸಹ ಪುತ್ರನ ಈ ಪತ್ರವನ್ನು ಓದಿ ಗದ್ಗದಿತವಾಯಿತು. ಬಾ ಅವರಿಗೂ ಈ ಪತ್ರದ ಬಗ್ಗೆ ತಿಳಿದಾಗ ಅವರೂ ಸಹ ಬಿಕ್ಕಳಿಸಿ ರೋದಿಸಿದರು. ಒಂದು ಶಬ್ದವನ್ನೂ ಹೇಳದೆ ಅವರು ಸಾಕಷ್ಟು ಹೊತ್ತು ಪುತ್ರನ ಬರವಣಿಗೆಯ ಮೇಲೆ ಕೈಯಾಡಿಸಿದರು. ಬಾಪೂ ಸಹ ಬಾ ಅವರು ಮೌನದಿಂದ ಮಗನ ಪತ್ರದ ಮೇಲೆ ಕೈಯಾಡಿಸುವುದನ್ನು ತುಂಬಾ ಹೊತ್ತು ನೋಡಿದರು, ನಂತರ ಮಹಾದೇವ ದೇಸಾಯಿಯವರಿಗೆ ಹೇಳಿ ಪತ್ರವನ್ನು ಬರೆಯಿಸಿದರು

‘ನಿನ್ನ ಪತ್ರದಿಂದ ಹೃದಯ ಕರಗಿತು, ಒಂದು ವೇಳೆ ಉಪವಾಸದ ಪರಿಣಾಮಗಳಿಂದ ನಿನ್ನ ಜೀವನ ಪವಿತ್ರವಾಗುವುದಾದರೆ, ಇದು ದುಪ್ಪಟ್ಟು ಆಶೀರ್ವಾದವಾಗುವುದು. ನನ್ನನ್ನು ಭೇಟಿಯಾಗಲು ಬಾ. ನಿನಗೆ ಮಾರ್ಗವನ್ನು ತೋರಿಸುವ ಪ್ರಯತ್ನವನ್ನು ಮಾಡುತ್ತೇನೆ. ದೇವರು ನಿನ್ನನ್ನು ರಕ್ಷಿಸಲಿ.’